# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 22-03-2021 ಪ್ರಶ್ನೆ ಸಂಖ್ಯೆ : 1517 (1890)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 22-03-2021

ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಉನ್ನತ ಶಿಕ್ಷಣ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ವಿಷಯ : ವಿವಿಧ ಯೋಜನೆಗಳ ಬಗ್ಗೆ

(ಅ) ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಾವುವು; ಇಲ್ಲಿಯವರೆಗೆ ಎಷ್ಟು ಜನ ಫಲಾನುಭವಿಗಳಿಗೆ ವಿವಿಧ ರೀತಿಯ ಯೋಜನಾ ಸೌಲಭ್ಯ ಶಿಕ್ಷಣವನ್ನು ನೀಡಲಾಗಿದೆ; (ಜಿಲ್ಲಾವಾರು ವಿವರಗಳನ್ನು ನೀಡುವುದು)

(ಆ) ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ಮಂಜೂರಾದ ಮತ್ತು ವೆಚ್ಚವಾದ ಅನುದಾನವೆಷ್ಟು; (ಕಳೆದ ಮೂರು ವರ್ಷಗಳ ವಿವರ ನೀಡುವುದು)

(ಇ) ನಿರುದ್ಯೋಗಿಗಳು ಕನಿಷ್ಠ ಶಿಕ್ಷಣವನ್ನು ಪಡೆದವರು, ವಿಶೇಷತಾ: ಕೌಶಲ್ಯಾಧಾರಿತ ಶಿಕ್ಷಣ ತರಬೇತಿಯನ್ನು ಪಡೆಯಲಿಚ್ಛಿಸುವ ಮಹಿಳೆಯರು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿನ ಆಸಕ್ತರನ್ನು ಒಳಪಡಿಸಿಕೊಂಡು ಸರ್ವರೂ ಯಾವುದಾದರೂ ಒಂದು ವೃತ್ತಿ ಕೌಶಲ್ಯವನ್ನು ಪಡೆದು ಜೀವನ ನಡೆಸಲು ಶಕ್ತರಾಗಿಸುವಲ್ಲಿ ಇಲಾಖೆಯ ಕ್ರಿಯಾ ಯೋಜನೆಗಳಾವುವು; ಮಂಡ್ಯ ಜಿಲ್ಲೆಯಲ್ಲಿ ಯೋಜನಾನುಷ್ಠಾನದ ಪ್ರಗತಿಯ ಪ್ರಮಾಣದ ವಿವರಗಳೇನು? (ತಾಲ್ಲೂಕುವಾರು ವಿವರ ನೀಡುವುದು)